4328 (4942) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯ ಆಶ್ರಯ ಯೋಜನೆಯಡಿ ಕಳೆದ 10 ವರ್ಷಗಳಿಂದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿಧಾನ ಸಭಾ ಕ್ಷೇತ್ರಗಳಿಗೆ ಮಂಜೂರು ಮಾಡಲಾದ ಮನೆಗಳ ಸಂಖ್ಯೆ ಎಷ್ಟು; (ಕ್ಷೇತ್ರವಾರು ವಿವರ ಒದಗಿಸುವುದು)

ಆ) ಮನೆ ಹಂಚಿಕೆಯಲ್ಲಿ ತಾರತಮ್ಯ ಧೋರಣೆಯನ್ನು ಅನುಸರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿಲ್ಲವಾದಲ್ಲಿ, 2003-04ನೇ ಸಾಲಿನಲ್ಲಿ ಕುಂದಾಪುರ ವಿಧಾನಸಭಾ ಕ್ಷೇತ್ರಕ್ಕೆ ಕಡಿಮೆ ಮನೆಗಳನ್ನು ಮಂಜೂರು ಮಾಡಲು ಕಾರಣವೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಮತ್ಸ್ಯ ಆಶ್ರಯ ಯೋಜನೆಯಡಿ ಕಳೆದ 10 ವರ್ಷಗಳಿಂದ ಉಡುಪಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಿಗೆ 1533 ಮನೆಗಳನ್ನು ಮತ್ತು ದಕ್ಷಿಣ ಕನ್ನಡ ಜಿಲ್ಲೆ ವಿಧಾನ ಸಭಾ ಕ್ಷೇತ್ರಗಳಿಗೆ 270 ಮನೆಗಳನ್ನು ಮಂಜೂರು ಮಾಡಲಾಗಿದೆ. (ಕ್ಷೇತ್ರವಾರು ವಿವರ ಈ ಕೆಳಗಿನಂತಿದೆ)

ಉಡುಪಿ ಜಿಲ್ಲೆ		
1	ಕಾಪು ಕ್ಷೇತ್ರ	153
2	ಉಡುಪಿ ಕ್ಷೇತ್ರ	600
3	ಬ್ರಹ್ಮಾವರ ಕ್ಷೇತ್ರ	70
4	ಕುಂದಾಪುರ ಕ್ಷೇತ್ರ	540
5	ಬೈಂದೂರು ಕ್ಷೇತ್ರ	130
6	ಕಾರ್ಕಳ ಕ್ಷೇತ್ರ	40
	ಒಟ್ಟು	**1533**

ದಕ್ಷಿಣ ಕನ್ನಡ ಜಿಲ್ಲೆ		
1	ಉಳ್ಳಾಲ ಕ್ಷೇತ್ರ	66
2	ಮಂಗಳೂರು ಕ್ಷೇತ್ರ	104
3	ಸುರತ್ಕಲ್ ಕ್ಷೇತ್ರ	40
4	ಮುಲ್ಕಿ ಕ್ಷೇತ್ರ	60
	ಒಟ್ಟು	**270**

ಆ) ಇಲ್ಲ.

ಇ) ಬೇಡಿಕೆ ಅನುಸಾರ ಮತ್ತು ಅನುದಾನ ಲಭ್ಯತೆಯ ಅನುಗುಣವಾಗಿ ಮನೆಗಳನ್ನು ವಿಧಾನ ಸಭಾ ಕ್ಷೇತ್ರವಾರು ಹಂಚಲಾಗಿದೆ. 2003–04ನೇ ಸಾಲಿನಲ್ಲಿ ಈ ಕ್ಷೇತ್ರಕ್ಕೆ ನೀಡಿದ 10 ಮನೆಗಳು ಸೇರಿದಂತೆ ಕಳೆದ 10 ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ಒಟ್ಟು 540 ಮನೆಗಳನ್ನು ನೀಡಲಾಗಿದೆ. ಹಂಚಿಕೆ ಮಾಡುವುದರಲ್ಲಿ ಉಡುಪಿ ಜಿಲ್ಲೆಗಿಂತ ಕಡಿಮೆಯಾಗಿರುವುದಿಲ್ಲ. ಆದ್ದರಿಂದ, ಬೇರೆ ಕ್ಷೇತ್ರಗಳಿಗೆ ಹೋಲಿಸಿದಲ್ಲಿ ಕುಂದಾಪುರ ಕ್ಷೇತ್ರಕ್ಕೆ ಸಾಕಷ್ಟು ಮನೆಗಳನ್ನು ನೀಡಲಾಗಿದೆ.

4329 (4943) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಬಂದಿವೆ; (ವಿಧಾನ ಸಭಾವಾರು ವಿವರ ಕೊಡುವುದು)

ಆ) ಕಳೆದ ಹಲವಾರು ವರ್ಷಗಳಿಂದ ಮನೆ ಮಂಜೂರಾತಿ ಕೋರಿ ನಿರೀಕ್ಷೆಯಲ್ಲಿರುವ ಮೀನುಗಾರರಿಗೆ ಈ ವರ್ಷ ಮನೆ ಮಂಜೂರು ಮಾಡಲಾಗುವುದೇ;

ಇ) ಮೀನುಗಾರಿಕಾ ಆ ಮನೆಗಳನ್ನು ನಿರ್ಮಿಸುವ ಮೊತ್ತವನ್ನು ಈಗಿರುವ ರೂಪಾಯಿ 30.000 ರಿಂದ 50.000ಕ್ಕೆ ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;